Ref.No.54/2020

WW-1,

ದಿನಾಂಕಃ 03-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ-2 ನೇ ಪಾರ್ಟಿ ಪರವಾಗಿಃ ಶ್ರೀ.ಜೆ.ಪಿ.ವಕೀಲರಿಂದ

ನಾನು ಯೂನಿಯನ್ ನಲ್ಲಿರುವ ಎಲ್ಲರ ಪರವಾಗಿಯೂ ಸಾಕ್ಷಿ ಹೇಳುತ್ತಿದ್ದೇನೆ. ಯೂನಿಯನ್ನಲ್ಲಿ ಯಾರ್ಯಾರು ಇದ್ದಾರೆ ಎಂಬ ಬಗ್ಗೆ ಲಿಸ್ಟನ್ನು ಹಾಜರುಪಡಿಸಿದ್ದೇನೆ. ನಮ್ಮ ಯೂನಿಯನ್ನಲ್ಲಿರುವ 10 ಜನರನ್ನು ಬಿಟ್ಟು ಉಳಿದವರೆಲ್ಲರೂ 2 ನೇ ಪಾರ್ಟಿಯವರ ಬಳಿ ಕೆಲಸ ಮಾಡುತ್ತಿದ್ದಾರೆ ಎಂದರೆ ನಿಜ. ಅಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಯಾವಾಗ ಇಂಕ್ರಿಮೆಂಟ್ ಕೊಟ್ಟಿದ್ದಾರೆ ಮತ್ತು ಎಷ್ಟು ಸಂಬಳ ಪಡೆಯುತ್ತಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಅಲ್ಲಿ ಕೆಲಸ ಮಾಡುತ್ತಿರುವಂತಹ ಕೆಲಸಗಾರರು ಅಂದರೆ ನಮ್ಮ ಯೂನಿಯನ್ ಸದಸ್ಯರು ಎಂದು ನಾನು ಹೇಳುವವರು ಮ್ಯಾನೇಜ್ಮೆಂಟಿಗೆ ಒಂದು ಅರ್ಜಿಯನ್ನು ಕೊಟ್ಟು ಈ ಬೇಡಿಕೆ ಪಟ್ಟಿಯನ್ನು ನಾವು ಒತ್ತಾಯ ಪಡಿಸುವುದಿಲ್ಲ ಎಂದು ಹೇಳಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಅರ್ಜಿ ಕೊಟ್ಟ ನಂತರ ಮ್ಯಾನೇಜ್ಮೆಂಟ್ನವರು ಮತ್ತು ಸದರಿ ಯೂನಿಯನ್ ಸದಸ್ಯರು ಕಲಂ 2(ಪಿ) ಅನ್ವಯ ರಾಜಿ ಮಾಡಿಕೊಂಡರು ಎಂದರೆ ನನಗೆ ಮಾಹಿತಿ ಇಲ್ಲ. ನಮ್ಮ ಯೂನಿಯನ್ನಿನ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಹಾಜರುಪಡಿಸಿದ್ದೇನೋ ಎಂದು ನನಗೆ ನೆನಪಿಲ್ಲ ಬೇಕಾದಲ್ಲಿ ಹಾಜರುಪಡಿಸುತ್ತೇನೆ. ನಮ್ಮ ಯೂನಿಯನ್ನಿನ ಬೈಲಾ ಹಾಜರುಪಡಿಸಿದ್ದೇನೆ. ನಾನು 32 ಜನ ಸದಸ್ಯರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ. ನ್ಯಾಯಾಲಯದ ಮುಂದೆ ನಿಶಾನೆ ಡಬ್ಲ್ಯೂ-36 ಎಂದು ಗುರುತಿಸಲಾಗಿರುವ ದಾಖಲೆಗಳಲ್ಲಿ ಕಂಡುಬರುವಂತೆ ರಾಜೀನಾಮೆ ನೀಡಿದ ಸದಸ್ಯರು, ಈ ಕೇಸಿನ 32 ಯೂನಿಯನ್ ಸದಸ್ಯರು ಸೇರಿರುವುದಿಲ್ಲ. ನಿಶಾನೆ ಡಬ್ಲ್ಯೂ-35 ರಲ್ಲಿ 6 ನೇ ಅಜೆಂಡಾದಲ್ಲಿ ಇತರ ಕಾರ್ಖಾನೆಯಲ್ಲಿ ನೌಕರರಿಗೆ ಕೊಡುವ ಸೌಲಭ್ಯಗಳನ್ನು ನಮ್ಮ ಕಾರ್ಖಾನೆಯಲ್ಲಿ ಕೊಡಬೇಕೆಂದು ಕೇಳುವಂತೆ ನಿರ್ಧಾರ ಕೈಗೊಳ್ಳಲಾಯಿತು ಎಂದರೆ ನಿಜ. ನಾನು ಬೇರೆ ಯಾವ ಕಾರ್ಖಾನೆಗಳ ಬೇಡಿಕೆ ಪಟ್ಟಿಯನ್ನು ಪರಿಶೀಲಿಸಿದ್ದೇನೆ ಎಂದು ಹೇಳಲು ಆಗುವುದಿಲ್ಲ. ಆನಂತರ ಮ್ಯಾನೇಜ್ಮೆಂಟ್ ಮತ್ತು ಯೂನಿಯನ್ ನಡುವೆ ಕೆಲವು ದ್ವಿಪಕ್ಷೀಯ ಮೀಟಿಂಗ್ ಗಳು ನಡೆದವು ಎಂದರೆ ನಿಜ. ನಾನು ನೀಡಿದಂತಹ ಬೇಡಿಕೆ ಪಟ್ಟಿ ಮತ್ತು ಕೌಂಟರ್ ಡಿಮ್ಯಾಂಡ್ಗಳ ಬಗ್ಗೆ ಮಾತುಕತೆ ನಡೆಯಿತು ಎಂದರೆ ನಿಜ.ಮೀಟಿಂಗ್ನಲ್ಲಿ ಆರ್ಥಿಕ ಸೌಲಭ್ಯಗಳನ್ನು ಬಿಟ್ಟು ಉಳಿದ ವಿಚಾರಗಳಲ್ಲಿ ಮಾತುಕತೆ ನಡೆಯಿತು ಎಂದರೆ ನಿಜ. ಆನಂತರ ಕೋವಿಡ್ ಬಂದ ಕಾರಣ ಆರ್ಥಿಕ ಸಂಕಷ್ಟಗಳಿಂದಾಗಿ ಮೀಟಿಂಗ್ಗಳನ್ನು ಮಾಡಲು ಆಗಲಿಲ್ಲ ಎಂದರೆ ಸಾಕ್ಷಿಯು ಮೀಟಿಂಗ್ ಕೋವಿಡ್ ಮುಂಚೆಯೇ ಆಗಿತ್ತು ಎಂದು ನುಡಿಯುತ್ತಾರೆ. ಕೋವಿಡ್ ಬರುವ ಮುಂಚೆಯೇ ಬೇಡಿಕೆ ಪಟ್ಟಿಯನ್ನು ಹಿಂದಕ್ಕೆ ಪಡೆದುಕೊಳ್ಳಿ ಎಂದು ಮ್ಯಾನೇಜ್ಮೆಂಟ್ರವರು ಕೇಳಿದ್ದರು. ಭಾರತದಲ್ಲಿ ಕೋವಿಡ್ 2010 ರಲ್ಲಿ ಬಂತು. ಭಾರತದಲ್ಲಿ ದಿಃ23-3-2020 ರಂದು ಲಾಕ್ ಡೌನ್

Ref.No.54/2020

WW-1,

ಆರಂಭವಾಯಿತು ಎಂದರೆ ನಿಜ. ಆ ಸಮಯದಲ್ಲಿ 40 ದಿನ 2 ನೇ ಪಾರ್ಟಿ ಕಂಪನಿ ಕ್ಲೋಸ್ ಆಗಿತ್ತು ಎಂದರೆ ಸುಳ್ಳು. ಸಾಕ್ಷಿಯು ಅದು ರನ್ನಿಂಗ್‌ನಲ್ಲಿಯೇ ಇತ್ತು ಎಂದು ನುಡಿಯುತ್ತಾರೆ. ಅದರಿಂದ ಸಂದಾನ ಮಾಡಲು ಆಗಲಿಲ್ಲ ಎಂದು ದಿಃ13-20-2020 ರಂದು ಇಬ್ಬರೂ ಸಂಧಾನ ವಿಫಲವಾಯಿತು ಎಂದು ವರದಿಯನ್ನು ಕಳುಹಿಸಿದರು. ಮಿಡ್ಸುಬಿಷಿ ಕಂಪನಿಯ ಪ್ರಾಡಕ್ಟಗಳು ಅಮೇರಿಕ ಮತ್ತು ಯೂರೋಪ್ ಕಂಪನಿಗಳಿಗೆ ಹೋಗುತ್ತಿದ್ದವು ಎಂದರೆ ನಿಜ. ಕೋವಿಡ್ ಬಂದ ಮೇಲೆ ಡೀಸಲ್ ಮೆಷಿನ್ ಮ್ಯಾನುಫ್ಯಾಕ್ಟರಿಂಗ್ ಬಗ್ಗೆ ಬೇಡಿಗೆ ಕಡಿಮೆ ಆಯಿತು ಎಂದರೆ ಸಾಕ್ಷಿ ಮಾಹಿತಿ ಇಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ಮ್ಯಾನೇಜ್ಮೆಂಟ್ ಸ್ಟಾಫ. ರವರು ಶೇಕಡ 30 ರಷ್ಟು ಸಂಬಳವನ್ನು ಕಡಿತಗೊಳಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಕೋವಿಡ್ ಸಮಯದಲ್ಲಿ ಕೆಲಸಗಾರರಿಗೆ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ಅವರ ಸಂಬಳವನ್ನು ಕಡಿತಗೊಳಿಸಿರಲಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ನನ್ನನ್ನು ಕೆಲಸದಿಂದ ಸಸ್ಪೆಂಡ್ ಮಾಡಿದ್ದರಿಂದ ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ. ನನಗೆ 2 ನೇ ಪಾರ್ಟಿ ಕಂಪನಿಯಿಂದ ಸಸ್ಪೆಂಡ್ ಆಗಿ ಡಿಸ್ಮಿಸ್ ಆಗಿರುವುದರಿಂದ ಈ ಮೇಲೆ ಹೇಳಿದ ಕೆಲವು ವಿಚಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂಬುದು ನಿಜ. ಡಿಸ್ಮಿಸ್ ಮಾಡಿದ 10 ನೌಕರರನ್ನು ಹೊರತುಪಡಿಸಿ ಉಳಿದ ನೌಕರರು ಬೇಡಿಕೆ ಪಟ್ಟಿಯನ್ನು ಒತ್ತಾಯಿಸುವುದಿಲ್ಲ ಎಂದು ಮ್ಯಾನೇಜ್ಮೆಂಟಿಗೆ ಬರೆದುಕೊಟ್ಟಿದ್ದಾರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. 2 ನೇ ಪಾರ್ಟಿ ಕಂಪನಿಯಲ್ಲಿ ತರಭೇತುದಾರರನ್ನು ಡಿಸ್ ಕಂಟಿನ್ಯೂ ಮಾಡಿದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು 2 ನೇ ಪಾರ್ಟಿ ಕಂಪನಿಯಿಂದ ಸಸ್ಪೆಂಡ್ ಆದ ಮೇಲೆ ಏನೂ ಮಾಡುತ್ತಿರಲಿಲ್ಲ ಅದೇರೀತಿಯಲ್ಲಿ ಡಿಸ್ಮಿಸ್ ಆದ ಮೇಲೂ ಏನೂ ಮಾಡುತ್ತಿರಲಿಲ್ಲ. ಡಿಸ್ಮಿಸ್ ಆದ ನಂತರ ನಾನು ನನ್ನ ಸ್ವಂತ ಊರಾದ ಕೆ ಆರ್ ನಗರ ತಾಲ್ಲೂಕಿನ ದೊಡ್ಡ ವಡ್ಡರಗುಡಿಗೆ ಹೋದೆ. ವಿಚಾರಣೆ ಇದ್ದಾಗ ಮಾತ್ರ ನಾನು ಮೈಸೂರಿಗೆ ಬರುತ್ತೇನೆ. ಡಿಸ್ಮಿಸ್ ಆದ ನಂತರ ನ್ಯಾಯಾಲಯದಲ್ಲಿ ವಿಚಾರಣೆ ಇದ್ದಾಗ ಮೈಸೂರಿಗೆ ಬರುತ್ತಿದ್ದೆ. ನಾನು ಡಿಸ್ಮಿಸ್ ಆದ ನಂತರ ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ನೌಕರರ ಜೊತೆ ನನ್ನ ಸಂಪರ್ಕ ನಿಂತುಹೋಯಿತು ಎಂದರೆ ನಿಜ. ನಾನು ಊರಿಗೆ ಹೋಗಿದ್ದರಿಂದ ನಾನು ಅವರ ಜೊತೆ ಸಂಪರ್ಕವನ್ನು ಕಳೆದುಕೊಂಡೆ. ಕೆಲಸ ಮಾಡುತ್ತಿರುವ ಇತರ ಸದಸ್ಯರು ಯಾರು, ಏನು ಕೆಲಸ ಮಾಡುತ್ತಿದ್ದಾರೆ ಮತ್ತು ಎಷ್ಟು ಸಂಬಳ ತೆಗೆದುಕೊಳ್ಳುತ್ತಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

Ref.No.54/2020

WW-1,

ಈ ಹಂತದಲ್ಲಿ ಮುಂದಿನ ಪಾಟೀ ಸವಾಲಿಗೆ 2 ನೇ ಪಾರ್ಟಿ ವಕೀಲರು ಸಮಯ ಕೋರಿರುತ್ತಾರೆ. ಆದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪೆರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.